ಅಧ್ಯಕ್ಷರು:- ಈ ವಿಷಯಕ್ಕೆ ಸಂಬಂಧಪಟ್ಟಂತೆ ಏನಾದರು ಸ್ಪಷ್ಟೀಕರಣ ಕೇಳುವುದಾದರೆ ಕೇಳಿ.

ಶ್ರೀ ಸಿ.ಎಂ. ಉದಾಸಿ :- 6 ಪಥದ ರಸ್ತೆಯಾಗಬೇಕೆಂದು ಬೇಡಿಕೆ ಇಟ್ಟಿದ್ದಾರೆ. ಆದರೆ, ನಾಲ್ಕು ಪಥದ ರಸ್ತೆಯಾನ್ನಾಗಿ ಮಾಡುತ್ತಿರುವುದರಿಂದ ಅವರಿಗೆ ಅನುಮಾನ ಬಂದಿರಬೇಕು. ಈಗ ನಾಲ್ಕು ಪಥದ ರಸ್ತೆಯನ್ನು ಸದ್ಯಕ್ಕೆ ಮಾಡಲಾಗಿದೆ. ಇದರಲ್ಲಿ ತಮ್ಮ ಸಲಹೆ ಕೂಡ ಇತ್ತೆಂದು ನಾನು ಗಮನಿಸಿದ್ದೇನೆ.

ಅಧ್ಯಕ್ಷರು :- ಮಾನ್ಯ ಉದಾಸಿಯವರೆ, ಬಹುಶ: ಎಲ್ಲ ಮಂತ್ರಿಗಳು ಮತ್ತು ಎಲ್ಲ ಶಾಸಕರು ಅದೇ ರಸ್ತೆಯಲ್ಲಿ ಹೋಗಿಬರುವಂಥದ್ದನ್ನು ತಾವು ನೋಡುತ್ತಿದ್ದೀರಿ. ಆದ್ದರಿಂದ, ಆ ರಸ್ತೆಯನ್ನು ಎಷ್ಟು ಬೇಗ ಮಾಡುವುದಕ್ಕೆ ಸಾಧ್ಯವಿದೆಯೋ ಅಷ್ಟು ಬೇಗ ಮಾಡಬೇಕಾಗುತ್ತದೆ.

ಶ್ರೀಮತಿ ಸೀಮಾ ಅತೋಕ ಮಸೂತಿ :- ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಮತ್ತು ಈ ಕೆಲಸಕ್ಕೆ ಏನಾದರು ಕಾಲಮಿತಿ ಇಟ್ಟುಕೊಳ್ಳಲಾಗಿದೆಯೇ?

ಶ್ರೀ ಸಿ.ಎಂ. ಉದಾಸಿ :- ಇದನ್ನು ಸುಲಭವಾಗಿ ಹೇಳುವುದಕ್ಕೆ ಆಗುವುದಿಲ್ಲ. ಅತೀ ಶೀಘ್ರದಲ್ಲಿ ಮಾಡಲಾಗುತ್ತದೆ. ನಾನೂ ಕೂಡ ಹಳೆಯ ಧಾರವಾಡದ ಮನುಷ್ಯನಾಗಿದ್ದೇನೆ.

ಅಧ್ಯಕ್ಷರು:- ನೀವು ಯಾವಾಗಲೂ ಅದೇ ರಸ್ತೆಯ ಮೂಲಕ ಹೋಗಿ ಬರುತ್ತೀರಿ.

ಶ್ರೀ ಸಿ.ಎಂ. ಉದಾಸಿ:- ಅತೀ ಶೀಘ್ರದಲ್ಲಿ ರಸ್ತೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಊ) ವಿಷಯ :- ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಠೇವಣಿ ಹಣ ಮತ್ತು ಸ್ಥಳವನ್ನು ನೀಡಿಲ್ಲ ಎಂಬ ಕಾರಣಕ್ಕಾಗಿ ಸ್ಥಳಾಂತರಿಸುತ್ತಿರುವ ಬಗ್ಗೆ.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) :- ಮಾನ್ಯ ಅಧ್ಯಕ್ಷರೆ, ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಮಂಜೂರಾದ ಆರೋಗ್ಯ ಕೇಂದ್ರಗಳನ್ನು ಠೇವಣಿ

ಹಣ ಮತ್ತು ಸ್ಥಳ ನೀಡಿಲ್ಲ ಎಂಬ ಕಾರಣಕ್ಕಾಗಿ ಸ್ಥಳಾಂತರಿಸುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಕರುಣಾಕರರೆಡ್ಡಿ (ಕಂದಾಯ ಸಚಿವರು) (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಆರೋಗ್ಯ ರಕ್ಷಣೆಯ ಸೌಲಭ್ಯವನ್ನು ಜನರಿಗೆ ಅದರಲ್ಲಿಯೂ ಬಡ ಜನರಿಗೆ ನೀಡುವಾಗ ಪ್ರಾಥಮಿಕ ಆರೋಗ್ಯ ಕೇಂದ್ರಗಳು ರೋಗಗಳನ್ನು ತಡೆಗಟ್ಟುವಿಕೆ ಮತ್ತು ಪುನರ್‌ವಸತಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಪ್ರಸ್ತುತ ರಾಜ್ಯದಲ್ಲಿ 2192 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಪೈಕಿ 516 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ ಸೇರಿಸುವುದು ಸೇರಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಬುಡಕಟ್ಟು ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ 20,000 ಗ್ರಾಮೀಣ ಜನತೆಗೆ ಒಂದರಂತೆ ಹಾಗೂ ಇತರೇ ಪ್ರದೇಶದಲ್ಲಿ 30,000 ಗ್ರಾಮೀಣ ಪ್ರದೇಶದ ಜನರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಬಹುದು. ಆದರೆ ಜನಸಂಖ್ಯೆಗೆ ಹೋಲಿಸಿದರೆ ರಾಜ್ಯದಲ್ಲಿ 412 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹೆಚ್ಚುವರಿಯಾಗಿವೆ. 2007-08ನೇ ಸಾಲಿನಲ್ಲಿ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಪ್ರಸ್ತಾವನೆಗಳು ಬಂದಿದ್ದು ಅವುಗಳನ್ನು ಪರಿಗಣಿಸುವ ಸಲುವಾಗಿ ರಾಜ್ಯದಲ್ಲಿ ಮೇಲ್ದರ್ಜೆಗೆ ಏರಿಸಿದ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ವಿಲೀನಗೊಂಡಿದ್ದ 152 ಅವಶ್ಯವಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬೇರೆ ಸ್ಥಳಗಳಿಗೆ ಸ್ಥಳಾಂತರಿಸಲು ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ವಿಲೀನಗೊಂಡಿದ್ದ 152 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಅವಶ್ಯಕವಿರುವ ಬೇರೆ ಸ್ಥಳಗಳಿಗೆ ಸ್ಥಳಾಂತರಿಸಲು ಹಾಗೂ 48 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹೆಚ್ಚುವರಿಯಾಗಿ ಒಟ್ಟು 200 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಈ ಕೆಳಕಂಡ ಶರತ್ತುಗಳನ್ನು ವಿಧಿಸಿ ದಿನಾಂಕ : 4-10-2007 ರಂದು ಆದೇಶ ಹೊರಡಿಸಲಾಗಿತ್ತು. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ಥಾಪಿತವಾಗುವ ಪ್ರದೇಶದ ಜನರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೋಗಲು ಅಗತ್ಯವಿರುವ 2 ಎಕರೆ ಜಮೀನು ಮತ್ತು ತಾತ್ಕಾಲಿಕ ಕಟ್ಟಡವನ್ನು ಒದಗಿಸಬೇಕು. ಗ್ರಾಮಸ್ಥರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಂದು ಲಕ್ಷ ರೂ.ಗಳನ್ನು ವಂತಿಗೆ ಕಟ್ಟಬೇಕು. ತಾತ್ಕಾಲಿಕವಾದ

ಕಟ್ಟಡವನ್ನು ಪ್ರಾಥಮಿಕ ಮತ್ತು ಆರೋಗ್ಯ ಇಲಾಖೆಗೆ ಹಸ್ತಾಂತರಿಸಿದ ನಂತರವೇ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳತಕ್ಕದ್ದು ಮತ್ತು ಗ್ರಾಮಸ್ಥರು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಅಗತ್ಯವಿರುವ ನಿವೇಶನ ಮತ್ತು ಕಟ್ಟಡವನ್ನು ಒಂದು ವರ್ಷದ ಒಳಗಾಗಿ ಒದಗಿಸದಿದ್ದಲ್ಲಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಅಗತ್ಯವಿಲ್ಲವೆಂದು ಭಾವಿಸಿ ಮಂಜೂರಾತಿಯನ್ನು ರದ್ದುಪಡಿಸಲಾಗುವುದು. ನಿಗದಿತ ಒಂದು ವರ್ಷದ ಅವಧಿಯೊಳಗೆ ಮೇಲ್ಕಂಡ ಷರತ್ತುಗಳನ್ನು ಕುರಿತು ಪರಿಶೀಲಿಸಲಾಗಿ ಇದುವರೆಗೆ 53 ಪ್ರಕರಣಗಳಲ್ಲಿ ಎಲ್ಲಾ ಶರತ್ತುಗಳನ್ನು ಪಾಲಿಸಲಾಗಿದೆ. 53 ಪ್ರಕರಣಗಳಲ್ಲಿ ಶರತ್ತುಗಳನ್ನು ಭಾಗಶಃ ಪಾಲಿಸಲಾಗಿದೆ. 94 ಪ್ರಕರಣಗಳಲ್ಲಿ ಯಾವುದೇ ಶರತ್ತುಗಳನ್ನು ಪಾಲಿಸಿರುವುದಿಲ್ಲ. ಈ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರ ಒಂದು ನೀತಿ ನಿರ್ಣಯವನ್ನು ಸಧ್ಯದಲ್ಲಿಯೇ ತೆಗೆದುಕೊಳ್ಳಲಾಗುವುದೆಂದು ತಿಳಿಸುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಕರುಣಾಕರರೆಡ್ಡಿಯವರು Revenue Minister ಎಂದು ತಿಳಿದಿದ್ದೆ ಅವರಿಗೆ Health Department ನ್ನು ಕೊಟ್ಟಿರುತ್ತೀರಾ?

ಶ್ರೀ ಸಿ.ಎಸ್. ಪುಟ್ಟೇಗೌಡ :- ಮಾನ್ಯ ಅಧ್ಯಕ್ಷರೆ, ಕೆಲವು ಶಾಸಕರು ನಾವೆಲ್ಲಾ ಹೋಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿಯನ್ನು ಮಾಡಿಕೊಂಡು ಪತ್ರವನ್ನು ಕೂಡ ಕೊಟ್ಟಿರುತ್ತೇವೆ. ಇವರು ಒಂದು ವರ್ಷದೊಳಗೆ ಏನು ಠೇವಣಿ ಹಣವನ್ನು ಗ್ರಾಮಾಂತರ ಪ್ರದೇಶದಲ್ಲಿ ಒಂದು ಲಕ್ಷ ರೂ.ಗಳನ್ನು ಕಟ್ಟಬೇಕು ಮತ್ತು ಎರಡು ಎಕರೆ ಜಾಗವನ್ನು ಕೊಡಬೇಕೆಂದು ಹೇಳುತ್ತಾರೆ ಇದೆಲ್ಲಾ ಗ್ರಾಮಾಂತರ ಪ್ರದೇಶದಲ್ಲಿ ಅತ್ಯಂತ ಕನಿಷ್ಟ ಸ್ಥಿತಿ ಇದೆ. ಅಲ್ಲಿ ಒಂದು ಲಕ್ಷ ರೂ.ಗಳನ್ನು ಕೊಡುವುದಕ್ಕಾಗುವುದಿಲ್ಲ. ಅದಕ್ಕೆ ನಾವು ಶಾಸಕರ ನಿಧಿಯಿಂದಲೇ ಕೊಡಬೇಕೆಂದರೆ ಆ ಒಂದು ಲಕ್ಷ ರೂ.ಗಳನ್ನು ಕೊಟ್ಟು ಬಿಡುತ್ತೇವೆ ಅದು ಸುಲಭವಾಗಿ ಆಗಿ ಬಿಡುತ್ತದೆ. ಎರಡು ಎಕರೆ ಸರ್ಕಾರಿ ಜಾಗವಿದ್ದರೆ ಸರಿ. ಇಲ್ಲವೆಂದರೆ ದಯಮಾಡಿ ಅಲ್ಲಿ ಜಾಗ ಸಿಗುವುದು ಬಹಳ ಕಷ್ಟವಿದೆ. ಅದಕ್ಕಾಗಿ ಸರ್ಕಾರವೇ ಎರಡು ಎಕರೆ ಜಾಗವನ್ನು ಅಕ್ವಾಯರ್ ಮಾಡಿಕೊಂಡರೆ ಅದಕ್ಕೆ ಬೇಕಾಗುವ ಹಣವನ್ನು ಶಾಸಕರ ನಿಧಿಯಿಂದಲೇ ತೆಗೆದುಕೊಳ್ಳಲಿ ಏನು ಪರವಾಗಿಲ್ಲ. ಜಾಗವನ್ನು ಕೊಡುವ ಒಂದು ವ್ಯವಸ್ಥೆಯನ್ನು ಮಾಡಿಕೊಡಬೇಕು ಮತ್ತು ಅದಕ್ಕೆ ಟೈಮ್ ಕೊಡಬೇಕು. ಈಗ ಒಂದು ವರ್ಷವೆಂದು ಹೇಳುತ್ತಿದ್ದಾರೆ. ರಾಜ್ಯಪಾಲರ ಆಡಳಿತ ಇತ್ತು ಜನಪ್ರತಿನಿಧಿಗಳ ಗಮನ ಆ ಕಡೆ ಇರಲಿಲ್ಲ. ಹಳ್ಳಿಯಲ್ಲಿ ಒಬ್ಬರೆ ವಾಲೆಂಟರಿಯಾಗಿ

ಇಂತಹ ಕಾರ್ಯವನ್ನು ಮಾಡುವುದಕ್ಕೆ ಮುಂದೆ ಬರುವುದಿಲ್ಲ. ಅದಕ್ಕೆ ಇನ್ನು ಒಂದು ವರ್ಷ ಟೈಮ್ ಕೊಟ್ಟು ಮಾಡಬೇಕು. ದಯಮಾಡಿ ಹೊಸ ಆಸ್ಪತ್ರೆಗಳನ್ನು ಮಂಜೂರು ಮಾಡುವುದಕ್ಕೆ ನಮ್ಮ ಅಡ್ಡಿಯಿಲ್ಲ. ಈಗ ಕಳೆದ ಸರ್ಕಾರದಲ್ಲಿ ಕೊಟ್ಟಂಥದ್ದನ್ನು ಬೇರೆ ಕಡೆ ಶಿಫ್ಟ್ ಮಾಡುವುದು ಬೇಡ. ಏಕೆಂದರೆ, ಆ ಭಾಗದ ಜನರೆಲ್ಲರೂ ಕೂಡ ನಮ್ಮೂರಿಗೆ ಆಸ್ಪತ್ರೆ ಬಂತು ಎಂದು ಆಸೆ ಇಟ್ಟುಕೊಂಡಿದ್ದಾರೆ. ಡಾಕ್ಟರ್‌ಗಳು ಕೂಡ ಎಲ್ಲೂ ಬರುತ್ತಿಲ್ಲ. ಏಕೆಂದರೆ ಅವರಿಗೆ ಸಂಬಳ ಜಾಸ್ತಿ ಕೊಡುವುದಕ್ಕೆ ಸರ್ಕಾರ ಇನ್ನು ಅದಕ್ಕೆ ಏನು ಮಾರ್ಗೋಪಾಯ ಕಂಡು ಹಿಡಿಯಲಿಲ್ಲ. ಯಾವ ಊರಲ್ಲಿ ಎಂ.ಬಿ.ಬಿ.ಎಸ್. ಡಾಕ್ಟರ್‌ಗಳು ಒಬ್ಬರು ಬರುತ್ತಿಲ್ಲ. ದಯಮಾಡಿ ಅದನ್ನು ಕೂಡ ಗಂಭೀರವಾಗಿ ಪರಿಗಣನೆ ಮಾಡಿ ಎಂ.ಬಿ.ಬಿ.ಎಸ್. ಡಾಕ್ಟರ್‌ಗಳು ಬರುವುದಕ್ಕೆ ಏನಾದರೂ ಸರ್ಕಾರ ಹೊಸದಾಗಿ ಯೋಚನೆಯನ್ನು ಮಾಡಬೇಕು. ಆ ಠೇವಣಿ ಹಣವನ್ನು ಎಂ.ಎಲ್.ಎ.ಫಂಡ್‌ದಿಂದ ಕೊಡುವುದಕ್ಕೆ ಅವಕಾಶ ಕೊಡಬೇಕು. ಅದರ ಸಮಯವನ್ನು ಕೂಡ ಮುಂದೂಡಬೇಕು. ಒಂದು ವರ್ಷ ಸಮಯ ಮುಗಿದು ಹೋಗಿದೆ ನಾವು ಅದನ್ನು ಸ್ಥಳಾಂತರ ಮಾಡಿ ಬಿಡುತ್ತೇವೆಂದರೆ, ಕೊಟ್ಟಿರುವ ಆಸ್ಪತ್ರೆಗಳನ್ನು ಕಿತ್ತಿದರೆ ಬಹಳ ದೊಡ್ಡ ರಂಪ ಆಗಿ ಬಿಡುತ್ತದೆ. ಇನ್ನಷ್ಟು ಹೊಸ ಆಸ್ಪತ್ರೆಗಳನ್ನು ಕೊಡುವುದಕ್ಕೆ ನಮ್ಮ ತಕರಾರು ಏನಿಲ್ಲ.

ಶ್ರೀ ಜಿ. ಕರುಣಾಕರರೆಡ್ಡಿ :- ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಈಗಾಗಲೇ ಕೊನೆಯ ಪ್ಯಾರಾದಲ್ಲಿ ತಿಳಿಸಲಾಗಿದೆ. ಅದರ ಬಗ್ಗೆ ಕುಲಂಕಷವಾಗಿ ಪರಿಶೀಲಿಸಿ ಸರ್ಕಾರ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತದೆಂದು ಹೇಳಿ ಅದರ ಪ್ರಕಾರ ಒಂದು ಸೂಕ್ತ ನೀರ್ಣಯವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಡಿ.ಕೆ. ಶಿವಕುಮಾರ :- ಮಾನ್ಯ ಅಧ್ಯಕ್ಷರೆ, ಎಂ.ಎಲ್.ಎ.ಫಂಡ್ ಎಂದು ಒಂದು ಕೋಟಿ ರೂ.ಗಳನ್ನು ಏನು ಕೊಡುತ್ತೀರಿ ಅದನ್ನು ಅವರು ಕಟ್ಟುತ್ತೇವೆಂದು ಹೇಳಿದ್ದಾರೆ. ಆಗಬಹುದು ಎನ್ನುವುದಕ್ಕೆ ಏನು? ಜಮೀನು ಅಕ್ವಾಯರ್ ಮಾಡುವುದಕ್ಕೂ ನಮ್ಮ ದುಡ್ಡು ಕೊಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಪರಿಶೀಲನೆ ಮಾಡುತ್ತೇನೆ ಎಂದು ಏಕೆ? ಆಗಬಹುದು ಎಂದು ಹೇಳಿದರೆ ಆಯಿತು.

ಅಧ್ಯಕ್ಷರು :- ಮಾನ್ಯ ಪುಟ್ಟೇಗೌಡರು ಏನು ಸಲಹೆಯನ್ನು ಕೊಟ್ಟರು ಎಂದರೆ, ಎಂ.ಎಲ್.ಎ.ಫಂಡ್‌ದಿಂದ ಈ ಠೇವಣಿ ಹಣವನ್ನು ಪರ್ಮಿಷನ್ ಕೊಟ್ಟರೆ ತೆಗೆದುಕೊಂಡು ಮಾಡಬಹುದು.

ಶ್ರೀ ಡಿ.ಕೆ. ಶಿವಕುಮಾರ್ :- ಆಗಬಹುದು ಎಂದು ಒಪ್ಪಿಕೊಳ್ಳಿ ಸ್ವಾಮಿ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರೆ ಒಳ್ಳೆಯದು. ಏಕೆಂದರೆ, ಇದರಿಂದ ಗ್ರಾಮಾಂತರ ಪ್ರದೇಶದ ಜನರಿಗೆ ಅನುಕೂಲವಾಗುವಂಥ ಕೆಲಸ. ಸರ್ಕಾರಕ್ಕೆ ಇದು ಏನು ದೊಡ್ಡದಲ್ಲ. ಜಮೀನು ಕೂಡ ಕೊಡಿಸುವ ಕೆಲಸ ಆಗಬೇಕು.

ಶ್ರೀ ಜಿ. ಕರುಣಾಕರ ರೆಡ್ಡಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರೆಲ್ಲರೂ ಏನು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಅದರ ಬಗ್ಗೆ ಸರ್ಕಾರ ಕೂಡಲೇ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಮತ್ತು ಮುಖ್ಯಮಂತ್ರಿಗಳು ಚರ್ಚೆ ಮಾಡಿ ಕ್ರಮ ಕೈಗೊಳ್ಳುತ್ತಾರೆಂದು ಹೇಳುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ನೇರವಾಗಿ ಉತ್ತರವನ್ನು ಕೊಡಬೇಕು. ಆಸ್ಪತ್ರೆ ಬರಬೇಕೆನ್ನುವುದು ಆ ಭಾಗದ ಜನರ ಬಹಳ ದಿನದ ಬೇಡಿಕೆಯಾಗಿದೆ. ಅಪರೂಪಕ್ಕೆ ಆಸ್ಪತ್ರೆ ಮಂಜೂರಾಗಿದೆ ಅದನ್ನು ವಾಪಸ್ಸು ಸರ್ಕಾರ ಕಿತ್ತುಕೊಳ್ಳುತ್ತದೆಂದು ಹೇಳಿದರೆ ಹೇಗೆ ಆ ಭಾಗದ ಜನಕ್ಕೆ ಅನ್ಯಾಯವಾಗುತ್ತದೆ. ದಯಮಾಡಿ ಈ ಕಡೆ ಗಮನವನ್ನು ಮಾನ್ಯ ಮುಖ್ಯಮಂತ್ರಿಗಳು ಹರಿಸಬೇಕು.

ಶ್ರೀ ವೈ.ಎನ್. ರುದ್ರೇಶಗೌಡ :- ಬಡ ಜನರಿಗೆ ಅನುಕೂಲವಗುವುದರಿಂದ ಆ ಷರತ್ತನ್ನು ಸರ್ಕಾರ ರದ್ದುಪಡಿಸಬೇಕು.

ಡಾ॥ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಎಂ.ಎಲ್.ಎ.ಗಳಿಗೆ ಏನು ಒಂದು ಕೋಟಿ ರೂ.ಗಳ ಅನುದಾನವನ್ನು ಕೊಟ್ಟಿದ್ದೇವೆ. ಒಂದೂವರೆ ಕೋಟಿ ರೂ.ಗಳವರೆಗೆ ಕಾಮಗಾರಿಯನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. At least ಒಂದು ಕೋಟಿ ರೂ.ಗಳಾದರೂ ಈ ವರ್ಷ ಖರ್ಚಾಗಬೇಕು ಎನ್ನುವುದು ನಮ್ಮ ಸದುದ್ದೇಶ. ಕೆಲವು ಜಿಲ್ಲಾಧಿಕಾರಿಗಳು ಸ್ವಲ್ಪ ಅಡ್ಡಿ ಆತಂಕಗಳನ್ನು ಮಾಡುತ್ತಿದ್ದಾರೆ. ಅದಕ್ಕೆ ನಾನು ನಿನ್ನೆ ದಿವಸ ಚರ್ಚೆಯನ್ನು ಮಾಡಿದಾಗ ಲೋಕಸಭೆಯ ಸದಸ್ಯರಿಗೆ ಯಾವ ರೀತಿಯ ಒಂದು ನಿಯಮಾವಳಿಗಳು ಇದೆ. ಅದೇ ರೀತಿ ಶಾಸಕರ ಫಂಡ್‌ನ್ನು ಖರ್ಚು ಮಾಡಬೇಕು ಎಂದು ಹೇಳಿ directions ಕೊಡುವುದಕ್ಕೆ ಹೇಳಿದ್ದೇನೆ. ಸಾರ್ವಜನಿಕರು ಈ ಒಂದು ಆಸ್ಪತ್ರೆಗೆ ಒಂದು ಲಕ್ಷ ರೂ.ಗಳ ಠೇವಣಿ ಹಣ ಕೊಡಬೇಕೆಂದು ಏನಿದೆ ಆ

ದುಡ್ಡನ್ನು ಕೊಡುವ ಶಕ್ತಿ ಅನೇಕ ಗ್ರಾಮಗಳಲ್ಲಿ ಇರುವುದಿಲ್ಲ. ಹಾಗಾಗಿ ಕೆಲಸಗಳು ಆಗುವುದಿಲ್ಲ ಮತ್ತು ಅರ್ಧಂಬರ್ಧ ಆಗಿರುತ್ತವೆ. ಶಾಸಕರಿಗೆ ಸಹಾಯವನ್ನು ಕೊಡಬೇಕೆಂದು ಅನಿಸಿದರೆ ಒಂದು ಲಕ್ಷ ರೂ.ಗಳನ್ನು ಕೊಡುವುದನ್ನು ಸೇರಿಸಿ ಹೊಸ ನಿಯಮಾವಳಿಗಳನ್ನು ಮಾಡಿ 3-4 ದಿವಸದಲ್ಲಿ ಒಂದು circular ನ್ನು ಕಳುಹಿಸಿ ಶಾಸಕರ ಅನುದಾನದಲ್ಲಿ ಕೊಡುವ ಒಂದು ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಸಿ.ಎಸ್. ಪುಟ್ಟೇಗೌಡ :- ಈಗ ಜಿಲ್ಲಾಧಿಕಾರಿಗಳು ಅದನ್ನು ವಾಪಸ್ಸು ಕಳುಹಿಸುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ಕೆಲಸ ಮಾಡಿಕೊಡುತ್ತೇವೆಂದು ಹೇಳಿರುವುದರಿಂದ ನಾವೆಲ್ಲಾ ಶಾಸಕರು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇವೆ.

ಶ್ರೀ ವೈ.ಎನ್. ರುದ್ರೇಶಗೌಡ :- ಪ್ರತಿ ಗ್ರಾಮದಲ್ಲಿ ಸರ್ಕಾರಿ ಜಾಗವೆಂದು ಇರುತ್ತದೆ.

ಅಧ್ಯಕ್ಷರು :- Land acquisition ಮಾಡಿಸಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಸರ್ಕಾರದಿಂದ ಜಮೀನು ವಶ ಪಡಿಸಿಕೊಳ್ಳಬೇಕು.

ಅಧ್ಯಕ್ಷರು :- ಮಾನ್ಯ ಶಿವಲಿಂಗೇಗೌಡರೆ ತಾವು ಕುಳಿತುಕೊಳ್ಳಿ. ಆಯಿತು, ಅದನ್ನು ಬೇರೆ ವಿಷಯದಲ್ಲಿ ಚರ್ಚೆ ಮಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಅಲ್ಲಿ ಸರ್ಕಾರದಿಂದ ಎರಡು ಎಕರೆ ಜಮೀನನ್ನು ಕೊಡಿಸಿ. ಅದನ್ನು ಕೊಡಿಸುವ ವ್ಯವಸ್ಥೆ ಮಾಡಿ.

ಅಧ್ಯಕ್ಷರು :- ನೀವು ಸಲಹೆ ಮಾಡಿ, ಎಲ್ಲಿ ಸರ್ಕಾರಿ ಜಮೀನು ಇದೆ ಅಲ್ಲಿ ಕೊಡಿಸಿಯೇ ಕೊಡಿಸುತ್ತಾರೆ. ಸರ್ಕಾರದಿಂದ ಕೊಟ್ಟೆ ಕೊಡುತ್ತಾರೆ.

7. ಪ್ರಕಟಣೆ

ಘನತೆವೆತ್ತ ರಾಷ್ಟ್ರಪತಿಯವರ ಸಂದೇಶ :

ಅಧ್ಯಕ್ಷರು :- ಭಾರತ ಸಂವಿಧಾನದ ಅನುಚ್ಛೇದ 201ರ ರೀತ್ಯಾ ಘನತೆವೆತ್ತ ರಾಷ್ಟ್ರಪತಿಯವರಿಂದ ಕೆಳಕಂಡ ಸಂದೇಶವನ್ನು ಸ್ವೀಕರಿಸಲಾಗಿದ್ದು ಅದನ್ನು ಸದನದ ಗಮನಕ್ಕೆ ತರಲಾಗುತ್ತಿದೆ. "I, Pratibha Devisingh Patil, President of India, having considered the